ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನಕಪುರ ತಾಲ್ಲೂಕಿನಲ್ಲಿ ಏನು ಅಕ್ರಮ ಕ್ವಾರಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅದನ್ನು ತಡೆ ಹಿಡಿದು ನಿಲ್ಲಿಸತಕ್ಕ ಬಗ್ಗೆ ಎಲ್ಲಾ ಉಗ್ರ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಯಾರು ಯಾರು ಇಂತಹ ಅಕ್ರಮ ವ್ಯವಹಾರ ಮಾಡುತ್ತಿದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಿದ್ದೇವೆ. ಮಾನ್ಯ ಸದಸ್ಯರು ಈ ಜನ ಕಂದಾಯ ಭೂಮಿಯಲ್ಲಿ ಅಕ್ರಮವಾಗಿ ಕ್ವಾರಿ ಮಾಡುತ್ತಿದ್ದಾರೆಂದು ಹೇಳಿದರು. ರೆವಿನ್ಯೂ ಇಲಾಖೆಯವರು, ಅದಕ್ಕೆ ಸಂಬಂಧಪಟ್ಟವರು ಇದರ ಬಗ್ಗೆ ತಕ್ಷಣ ಡಿಟೆಕ್ಟ್ ಮಾಡಬೇಕಾಗಿತ್ತು. ಬಹುಶಃ ಇದರಲ್ಲಿ ಸ್ವಲ್ಪ ಲೋಪದೋಷ ಇದೆ. ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಕಂದಾಯ ಇಲಾಖೆಗೆ ಪತ್ರ ಕೂಡಾ ಬರೆದಿದ್ದೇವೆ. ಏಕೆ ಡಿಟೆಕ್ಟ್ ಆಗಲಿಲ್ಲ, ಎಲ್ಲಿ ಲೋಪ ದೋಷ ಇದೆ, ಎಲ್ಲಿ ಅವರ ಅಧ್ಯಕ್ಷತೆ ಇದೆ ಎಂದು ನಾವು ಈಗಾಗಲೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಪತ್ರವನ್ನು ಬರೆದಿದ್ದೇನೆ. ಆದರೆದರಿಂದ ಇದರಲ್ಲಿ ಮೂಲಭೂತವಾಗಿ ಏನಿದೆ ಎಂದರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲಿ ಎರಡು ಇಲಾಖೆಗಳು ಬರುತ್ತವೆ.

ಒಂದು ಡೈರೆಕ್ಟರ್ ಆಫ್ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್. ಅವರು ಎಲ್ಲಿ ಪಿಕ್ಚರ್‌ಗೆ ಬರುತ್ತಾರೆಂದರೆ ಲೀಸ್‌ಗೆ ಕೊಟ್ಟಾಗ ಪಿಕ್ಕರ್‌ಗೆ ಬರುತ್ತಾರೆ. ಅಥವಾ ಇಲ್ಲೀಗಲ್ ಕ್ವಾರಿ ಆದರೆ ಅದನ್ನು ನಿಲ್ಲಿಸತಕ್ಕ ಪರಿಸ್ಥಿತಿ ಬರುತ್ತದೆ. ಆದರೆ ಇದು ಸತತವಾಗಿ ನಡೆಯುತ್ತಿರುವುದರಿಂದ ಅದು ಕಂದಾಯ ಇಲಾಖೆಯ ಭೂಮಿಯಾಗಿರುವುದರಿಂದ, ಕಂದಾಯ ಇಲಾಖೆಯ ಕರ್ತವ್ಯವೂ ಇದೆ. ಅದನ್ನು ತಕ್ಷಣ ಮೈನ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ಗೆ ವರದಿ ಮಾಡಬೇಕು. ಇದರಲ್ಲಿ ಏನಾದರೂ ಲೋಪವಿದ್ದರೆ ಅಧಿಕಾರಿಗಳ ಮೇಲೆ ಕೂಡ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಆದ್ದರಿಂದ ಈಗ ಏನು ಕೆಲವು ಸಮಯದಿಂದ ಅವ್ಯಾಹತವಾಗಿ ನಡೆಯುತ್ತಿತ್ತು ಎಂದು ಇದೆ ಈಗ ಅದು ನಿಂತು ಹೋಗಿದೆ: ಮತ್ತೆ ಬಿಗಿಯಾವ ಕ್ರಮವನ್ನು ತೆಗೆದುಕೊಂಡು ಅದನ್ನು ತಡೆ ಹಿಡಿಯುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಕೆ. ಶಿವಕುಮಾರ್.—ಇದನ್ನು ನಿಲ್ಲಿಸಲಿಕ್ಕೆ ಸರ್ಕಾರದಿಂದ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಬೇಕು, ಏಕೆಂದರೆ, ಪೋಲೀಸ್ ಇಲಾಖೆಯ ರಕ್ಷಣೆ ಇಲ್ಲದೆ ರೆವಿನ್ಯೂ ಇಲಾಖೆಯವರಾಗಲಿ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರಾಗಲಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಈ ಮೂರೂ ಇಲಾಖೆಗಳನ್ನು ಸೇರಿಸಿ ಒಂದು ಸ್ಪೆಷಲ್ ಸ್ಕ್ವಾಡ್ ಮಾಡುವುದಾದರೆ ಸಾಧ್ಯ. ಇಲ್ಲದಿದ್ದರೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಕಂದಾಯ ಇಲಾಖೆಗೆ ಟೈಮ್ ಇರುವುದಿಲ್ಲ. ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಬೆಂಗಳೂರಿನಿಂದ ಅಲ್ಲಿಗೆ ಬರುವುದಕ್ಕಾಗುವುದಿಲ್ಲ. ಅಲ್ಲಿ ಸಪರೇಟ್ ಆಫೀಸ್ ಇಲ್ಲ. ಪೋಲೀಸ್ ಇಲಾಖೆ, ಕಂದಾಯ ಇಲಾಖೆ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಈ ಮೂರು ಇಲಾಖೆಗಳನ್ನು ಒಟ್ಟಿಗೆ ಸೇರಿಸಿ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಿದರೆ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಅಪಾರವಾದ ಗಣಿ ಸಂಪತ್ತನ್ನು ಅಪಹರಿಸತಕ್ಕ ದೊಡ್ಡ ದೊಡ್ಡ ತಂಡಗಳು ಅಲ್ಲಲ್ಲಿ ತಯಾರಾಗಿವೆ. ಬಹುಶಃ ಮೂಲಭೂತವಾಗಿ ಗಣಿ ಮತ್ತು ಅರಣ್ಯ ಇಲಾಖೆಯನ್ನು ಸುಸಜ್ಜಿತಗೊಳಿಸತಕ್ಕ ಒಂದು ಪ್ರಸ್ತಾವ ಕೂಡ ಸರ್ಕಾರದಲ್ಲಿದೆ. ಎಲ್ಲಿ ಅಕ್ರಮವಾಗಿ ಕಳ್ಳಸಾಗಾಣಿಕೆ ನಡೆಯುತ್ತಿದೆ ಅದನ್ನು ತಡೆಗಟ್ಟಲು ಒಂದು ಮೊಬೈಲ್ ಸ್ಕ್ವಾಡ್ ಮಾಡಬೇಕೇ ಅಥವಾ ಇದು ಎಲ್ಲಿ ಕೇಂದ್ರೀಕೃತವಾಗಿದೆ ಅಲ್ಲಿ ಯಾವ ರೀತಿಯಲ್ಲಿ ಇಲಾಖೆಯನ್ನು ಸಜ್ಜುಗೊಳಿಸಬೇಕು ಎಂದು ಸರ್ಕಾರದಲ್ಲೂ ಪ್ರಸ್ತಾವನೆ ಇದೆ ಮತ್ತು ಸುಸಜ್ಜಿತವಾದ ಒಂದು ಪಡೆಯನ್ನು ಮಾಡಿಕೊಂಡರೆ ಅಕ್ರಮವಾಗಿ ಮಾಡತಕ್ಕ ವ್ಯವಹಾರಗಳು ಏನಿವೆ ಅವುಗಳನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ.

(ii) ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ದಂಟಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ತಮಿಳುನಾಡಿನ ಡಂಕಣಿಕೋಟೆ ತಾಲ್ಲೂಕಿನ ನೂರಾರು ರೈತರು ಅಕ್ರಮವಾಗಿ ಸಾಗು ಮಾಡಲು ಗಿಡಮರಗಳನ್ನು ಕಡಿಯುತ್ತಿರುವ ಬಗ್ಗೆ

ಶ್ರೀ ಜಿ. ರಾಜುಡಗೌಡ (ಹಾನೂರು).—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ದಂಟಿಹಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ತಮಿಳುನಾಡಿನ ಡಂಕಣಿಕೋಟೆ ತಾಲ್ಲೂಕಿನ ವಂಜಗಾನಹಳ್ಳಿ, ಬೈಲಪಟ್ಟಿ, ಕೆಸ್ತೂರು, ಬೀದರಹಳ್ಳಿ ಮತ್ತು ಮೋಟೂರು ಗ್ರಾಮದ ಜನಗಳು ಅಕ್ರಮವಾಗಿ ಸಾಗುವಳಿ ಮಾಡಲು ಗಿಡಮರಗಳನ್ನು ಕಡಿಯುತ್ತಿರುವ ಬಗ್ಗೆ ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಸಚಿವರ ಗಮನವನ್ನು ಸೆಳೆಯುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ,—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ದಂಬಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸುಮಾರು ೧೦೦೦ ಜನ ಅತಿಕ್ರಮಣದಾರರು ಕುರುಚಲು ಗಿಡಗಳನ್ನು ಅಲ್ಲಲ್ಲಿ ಕಡಿದು ಸುಮಾರು ಎರಡು ಸಾವಿರ ಎಕರೆಗಳಷ್ಟು ಅರಣ್ಯ ಪ್ರದೇಶವನ್ನು ಅತಿಕ್ರಮಿಸಲು ಮತ್ತು ಸಾಗು ಮಾಡಲು ಪ್ರಯತ್ನಿಸಿದ್ದು ನಿಜ. ಇದರಲ್ಲಿ ತಮಿಳುನಾಡಿನವರು ಸಹ ಸೇರಿರುತ್ತಾರೆ.

ಆದರೆ ಕೊಳ್ಳೇಗಾಲ ವಲಯ ಅರಣ್ಯಾಧಿಕಾರಿಯವರು ಮತ್ತು ಇತರ ಸಿಬ್ಬಂದಿಯವರು ಸ್ಥಳಕ್ಕೆ ಧಾವಿಸಿ ಗಿಡಮರಗಳನ್ನು ಕಡಿಯುವವರನ್ನು, ಸುಡುವವರನ್ನು ಓಡಿಸಿ ತಪ್ಪಿಸಿರುತ್ತಾರೆ. ಈ ಸಂಬಂಧದಲ್ಲಿ ೧೫ ಜನರನ್ನು ಸಹ ಬಂಧಿಸಿರುತ್ತಾರೆ. ಆದರೆ ನೂರಾರು ಅತಿಕ್ರಮಣದಾರರು ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಯವರು ತೆಗೆದುಕೊಂಡಿರತಕ್ಕಂತಹ ಕ್ರಮವನ್ನು ಉಲ್ಲಂಘಿಸಿ ಅವರೆಲ್ಲರನ್ನೂ ಬಂಧಿಸಿ ಎಂದು ಮುಂದೆ ಬಂದು ಕಾನೂನು ಸುವ್ಯವಸ್ಥೆಯನ್ನು ಭಗ್ನಗೊಳಿಸಲು ಯತ್ನಿಸಿರುತ್ತಾರೆ. ಇದರಿಂದಾಗಿ ಅರಣ್ಯ ಅಧಿಕಾರಿಗಳು ಇಂತಹ ಅತಿಕ್ರಮಣವನ್ನು ತಡೆಗಟ್ಟಲು ರಾಮಾಪುರದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೋಲೀಸ್ ಅಧಿಕಾರಿಗಳಿಗೆ ಎರಡು ತುಕಡಿ ಪೋಲೀಸ್ ಪಡೆಯನ್ನು ಶೀಘ್ರವಾಗಿ ಕಳುಹಿಸಿಕೊಡಲು ಕೇಳಿಕೊಂಡಿರುತ್ತಾರೆ.

† ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೆಟ್ಟಿರತಕ್ಕ ಉತ್ತರವನ್ನು ನಾವು ಪರಾಂಭರಿಸಿದಾಗ, ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಯಾವ ಅತಿಕ್ರಮ ಪ್ರವೇಶ ಮಾಡಿದ್ದಾರೆ ಅವರು ಇನ್ನು ಕೂಡ ಅಲ್ಲಿ ಇದ್ದಾರೆ, ಅವರನ್ನು ನಮ್ಮಿಂದ ಓಡಿಸುವುದಕ್ಕೆ ಸಾಧ್ಯವಿಲ್ಲ, ನಾವು ಜಿಲ್ಲಾ ಪೋಲೀಸ್ ಅಧಿಕಾರಿಗಳ ಸಹಾಯವನ್ನು ಕೇಳಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಅವರು ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವರುಗಳು ನಮ್ಮವರಲ್ಲ, ಅವರುಗಳೆಲ್ಲ. ಹೊರಗಡೆಯಿಂದ ಅಂದರೆ ತಮಿಳುನಾಡಿನಿಂದ ಬಂದವರು. ಅವರಿಗೆ ಅಲ್ಲಿ ಇರಲಿಕ್ಕೆ ಅವಕಾಶ ಕೊಟ್ಟರೆ, ಅಲ್ಲಿ ನೆಲೆಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆ ಮೇಲೆ ಅಲ್ಲಿ ಇನ್ನು ಅನೇಕ ಕೆಟ್ಟ ಕೆಲಸಗಳು ಪ್ರಾರಂಭವಾಗುತ್ತವೆ ದಯವಿಟ್ಟು ಪೋಲೀಸ್ ಪಡೆಯ ಸಹಾಯವನ್ನು ಪಡೆದು ಕೊಂಡು ಆದಷ್ಟು ಬೇಗ ಅವರ ಗುಡಿಸಲುಗಳನ್ನು ಕಿತ್ತು ಹಾಕಬೇಕು. ಮತ್ತು ಅಲ್ಲಿಂದ ಅವರನ್ನು ಓಡಿಸಬೇಕಂತಹ ಕೆಲಸವನ್ನು ಮಾಡಬೇಕು. ಮೊದಲು ಅಲ್ಲಿಗೆ ಪೋಲೀಸ್ ಪಡೆಯನ್ನು ಕಳುಹಿಸಬೇಕು ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ,

೧-೦೦ ಪಿ. ಎಂ:

ರಾಮಪುರ ಪೋಲೀಸ್ ಸ್ಟೇಷನ್‌ನಲ್ಲಿ ಇರತಕ್ಕಂಥವರು ಕೇವಲ ೧೦ ಜನ ಪೋಲೀಸರು ಆ ಹತ್ತು ಜನ ಪೋಲೀಸರು ಏನು ಮಾಡುವುದಕ್ಕೆ ಆಗುವುದಿಲ್ಲ, ತಮಿಳುನಾಡಿನಿಂದ ಸಾವಿರಾರು ಜನ ಬಂದಿದ್ದಾರೆ. ಅಲ್ಲಿ ಅವರು ಬೀಡು ಬಿಟ್ಟು ಗುಡಿಸಲುಗಳನ್ನು ಕಟ್ಟಿ ಕೊಂಡಿದ್ದಾರೆ. ಅಲ್ಲೇ ಅಡಿಗೆ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಬಹಶಃ ಮಳೆ ಬಿದ್ದ ಮೇಲೆ ಬಿತ್ತನೆ ಸಹ ಮಾಡುತ್ತಾರೆ. ಅಷ್ಟೇ ಅಲ್ಲ, ಅಕ್ರಮವಾಗಿ ದೊಡ್ಡ ದೊಡ್ಡ ಮರಗಳನ್ನು ಕೂಡ ಸಾಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅಲ್ಲಿರತಕ್ಕಂಥ ಕಾಡಿನಲ್ಲಿ ಏನು ಮನೆ ಕಟ್ಟತಕ್ಕಂಥ ಬೊಂಬು ಇತ್ತು, ಅದೆಲ್ಲ ವನ್ನೂ ಅಕ್ರಮವಾಗಿ ಸಾಗಣೆ ಮಾಡಿ ಬಿಟ್ಟರು. ಈಗ ಮಹದೇಶ್ವರ ಬೆಟ್ಟದ ಕಾಡಿನಲ್ಲಿ ಬೊಂಬುಗಳೇ ಇಲ್ಲ. ಇದಕ್ಕೆ ಅವಕಾಶ ಕೊಟ್ಟರೆ ಇನ್ನೂ ಅನೇಕ ಜನ ವೀರಪ್ಪನ್‌ನನ್ನು ಸೃಷ್ಟಿ ಮಾಡಿದ ಹಾಗೆ ಆಗುತ್ತದೆ. ದಯವಿಟ್ಟು ಇದರ ಕಡೆ ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ, ಸ್ವಾಮಿ ಪತ್ರಿಕೆಯಲ್ಲಿ ಬಂದಿರತಕ್ಕಂಥ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಲಂಡನ್‌ನಲ್ಲಿ ಬ್ರಿಟಿನ್ ರಾಣಿಯವರು ಮೃಗಾಲಯದಲ್ಲಿ ಒಂದು ಉಪಗ್ರಹ ಇಟ್ಟುಕೊಂಡು ಅದರ ಮೂಲಕವಾಗಿ ದೂರದಲ್ಲಿರತಕ್ಕಂಥ ಕಾಡುಗಳಲ್ಲಿ ಇರುವ ಆನೆಗಳ ಕಾಡುಗಳಲ್ಲಿರುವ ಚಲನವಲನ ನೋಡುತ್ತಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಇಲ್ಲಿ ಕೂಡ ಆ ವ್ಯವಸ್ಥೆ ಮಾಡಿದಾಗ ವೀರಪ್ಪನನ್ನು ಸುಲಭವಾಗಿ ಹಿಡಿಯಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ತಾವು ಏನು ಸೂಚನೆ ಮಾಡುತ್ತೀರಿ, ಅರಣ್ಯ ಮಂತ್ರಿಗಳನ್ನು ಲಂಡನ್‌ಗೆ ಕಳಿಸಿ, ಒಂದು ಉಪಗ್ರಹ ಹಾಕಿ ಆ ಮೇಲೆ ವೀರಪ್ಪನ್‌ನನ್ನು ಹಿಡಿಯಬೇಕೆಂದು ಹೇಳುತ್ತಿದ್ದೀರಿ,

ಶ್ರೀ ಜಿ ರಾಜಗೌಡ.—ಮತ್ತೆ ಆನೆಕಳ್ಳರನ್ನು, ಕಾಡುಗಳ್ಳರನ್ನು ಎಲ್ಲರನ್ನೂ ಪತ್ತೆ ಮಾಡ ಬಹುದು. ಹೆಚ್ಚು ಜನ ಸಿಬ್ಬಂದಿಯೂ ಬೇಕಾಗಂವುದಿಲ್ಲ. ಆದ್ದರಿಂದ ದಯವಿಟ್ಟು ಅದಷ್ಟು ಬೇಗ ತಮಿಳುನಾಡಿನವರನ್ನು ಹೊರಗೆ ಓಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊನೆಯ ಸೂಚನೆ ಏನು ಮಾಡಿದ್ದಾರೆ, ಬೆಂಗಳೂರಿನಿಂದ ಇಂಗ್ಲೆಂಡಿಗೆ ದೂರ ಜಾಸ್ತಿ ಇದೆ, ಅವರೆ ಮಾನ್ಯ ಅರಣ್ಯ ಸಚಿವರು ಬಂದಾಗ. ಆ ಉಪಗ್ರಹ ನೋಡಲಿಕ್ಕೆ ಲಂಡನ್‌ಗೆ ಹೋಗುವ ಪ್ರಸ್ತಾವನ್ನು ಅವರ ಮುಂದೆ ಮಾಡುತ್ತೇನೆ. ಈಗ ಅಂತಹ ವಿಜ್ಞಾನದ ಮುನ್ನಡೆಯನ್ನು ನಮಗೆ ಅಳವಡಿಸಲಿಕ್ಕೆ ಸಾಧ್ಯವಾಗುವುದಿದ್ದರೆ ಅದನ್ನು ವಿಚಾರ ಮಾಡೋಣ, ಆದರೆ ನಮಗೆ ಬಂದಿರುವಂಥ ಮಾಹಿತಿ ಪ್ರಕಾರ, ಸುಮಾರು ಒಂದು ಸಾವಿರ ಮುಂದಿ ಅತಿಕ್ರಮಣ ಮಾಡಿ ಅಲ್ಲಿ ತಾತ್ಕಾಲಿಕವಾಗಿ ಗುಡಿಸಲು ಕಟ್ಟಿ ವಾಸ ಮಾಡಿ ಸಾಗುವಳಿ ಮಾಡಬೇಕೆಂದು ಏನು ಇದ್ದರು, ಈಗ ಅವರನ್ನೆಲ್ಲ ಅಲ್ಲಿಂದ ಹೊರಗೆ ಕಳಿಸಿದ್ದಾರೆ ಎಂದು ನಮಗೆ ಮಾಹಿತಿ ಇದೆ, ಮಾನ್ಯ ಸದಸ್ಯರ ಮಾಹಿತಿ ಏನೆಂದರೆ, ಅವರೆಲ್ಲರೂ ಹೋಗಿಲ್ಲ ಎಂದು ಇದೆ. ಇದನ್ನು ನಾವು ಪುನಃ ನೋಡುತ್ತೇವೆ. ಆದರೆ ಅದು ರಿಸರ್ವ್ಡ್ ಫಾರೆಸ್ಟ್ ಇರುವುದರಿಂದ, ಅಲ್ಲಿ ಯಾರೂ ಇರಲಿಕ್ಕೆ ಆಗುವುದಿಲ್ಲ, ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ನಿನ್ನೆ ಮೊನ್ನೆ ಬಂದು ಅತಿಕ್ರಮಣ ಮಾಡಿದಂಥ ಎನ್‌ಕ್ರೋಚ್‌ಮೆಂಟ್ ಅನ್ನು ರೆಗ್ಯುಲರೈಸ್ ಮಾಡುವಂಥ ಪರಿಸ್ಥಿತಿ ಇಲ್ಲ ಆದ್ದರಿಂದ ಅಲ್ಲಿ ಯಾರೂ ಉಳಿದಿಲ್ಲವೆಂಬುದು ನಮ್ಮ ಮಾಹಿತಿ, ಅಲ್ಲಿ ಯಾರಾದರೂ ಉಳಿದುಕೊಂಡಿದ್ದರೂ ಕೂಡ ಅವರನ್ನು ಹೊರಗೆ ಕಳಿಸಲಿಕ್ಕೆ ಎಲ್ಲ ವಿಪ್ರಾಡು ಮಾಡುತ್ತೇವೆ. ಕನ್ಸರ್ವೇಟರ್ ಆಫ್ ಫಾರೆಸ್ಟ್, ಮೈಸೂರು ಸರ್ಕಲ್ ಅವರು ಕೂಡ ವಿ-ಟ್ರ್-ಠಿಕ್ಕೆ ಅಲ್ಲಿಗೆ ಹೋಗಿದ್ದಾರೆ. ಅಲ್ಲಿ ಏನಾಗಿದೆ ಎಂದರೆ, ಈ ಅತಿ ಕ್ರಮಣದಾರರಿಗೆ ಆ ಗ್ರಾಮದವರು ಸಹಾಯ ಸ್ವಲ್ಪ ಸಹಾನುಭೂತಿ ತೋರಿಸಿದಂಥ ಪರಿಸ್ಥಿತಿ ಇದೆ. ಇದನ್ನು ಬಹುಶಃ ಯಾರೂ ಕೂಡ ಎನ್‌ಕರೇಜ್ ಮಾಡುವ ಹಾಗಿಲ್ಲ. ರಿಸರ್ವ್ಡ್ ಫಾರೆಸ್ಟ್‌ನಲ್ಲಿ ಈ ಜಾಗವನ್ನು ಅತಿಕ್ರಮಣ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿ, ಅವರು ಯಾವ ರೀತಿಯಿಂದಲೂ ಗ್ರಾಮದವರೊಡನೆ ಸೇರಿಕೊಳ್ಳದ ಹಾಗೆ ಒತ್ತಾಯ ಮಾಡಬೇಕೆಂದು ಹೇಳಿ ಕನ್ಸರ್ವೇಟರ್ ಆಫ್ ಫಾರೆಸ್ಟ್ ಅವರು ಸಂದರ್ಶನ ನೀಡಿದ್ದಾರೆ. ಆದ್ದರಿಂದ ಅಲ್ಲಿ ಯಾವ ರೀತಿಯಲ್ಲೂ ಅತಿಕ್ರಮಣಕಾರರು ಇರುವ ಹಾಗಿಲ್ಲ, ಒಂದು ವೇಳೆ ಈಗ ಈಗ ಬಂದು ತಲೆ ತಪ್ಪಿಸಿ ಇದ್ದರೂ ಕೂಡ ಅವರು ಯಾವುದೇ ರೀತಿಯಾಗಿ ಅರಣ್ಯ ನಾಶ ಮಾಡದ ಹಾಗೆ ನಾವು ನೋಡುತ್ತೇವೆ. ಇನ್ನೊಂದು ಮಾಹಿತಿ ಏನಿದೆ ಎಂದರೆ, ಕಾರ್ಗಲ್ ಗಿಡಗಳು ಮರಗಳ ಕೆಳಗೆ ಇವೆ, ಅದನ್ನು ಸುಟ್ಟು ನೆಲಸಮ ಮಾಡಿ ಅತಿಕ್ರಮಣ ಮಾಡತಕ್ಕಂಥ ಪರಿಸ್ಥಿತಿ ಇದೆ. ದೊಡ್ಡ ದೊಡ್ಡ ಮರಗಳು ಹೋಗಿವೆ ಎಂದು ಹೇಳುತ್ತಿದ್ದಾರೆ. ದೊಡ್ಡ ದೊಡ್ಡ ಮರಗಳನ್ನು ತೆಗೆಯದ ರೀತಿಯಲ್ಲಿ ಎಲ್ಲಾ ಕ್ರಮ ತೆಗೆದುಕೊಂಡಿದ್ದಾರೆ. ಆ ಬಗ್ಗೆ ಯಾವುದೂ ದೊಡ್ಡ ಪ್ರಕರಣಗಳು ಬಂದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಏನು ಮಾಹಿತಿ ಕೊಟ್ಟಿದ್ದಾರೆ, ಅದನ್ನು ನಾವು ವಿಚಾರ ಮಾಡುತ್ತೇವೆ.

ಶ್ರೀ ಜಿ. ರಾಜಗೌಡ.—ತಮ್ಮ ಉತ್ತರದಲ್ಲಿ ಪೋಲೀಸ್‌ಪಡೆಯನ್ನು ಶೀಘ್ರವಾಗಿ ಕಳಿಸಿ ಕೊಡಲು ಕೇಳಿಕೊಂಡಿರುತ್ತಾರೆ ಎಂದು ಇದೆ ಇವರಂ ಕೇಳಿಕೊಂಡಿದ್ದಾರೆ ಆಷ್ಟೆ ಆವರನ್ನು ಇನ್ನೂ ಓಡಿಸಿಲ್ಲ ಸಾವಿರಾರು ಜನರನ್ನು ಒಂದೇ ದಿವಸದಲ್ಲಿ ಓಡಿಸುವುದಕ್ಕೆ ಆಗುತ್ತದೆಯೇ? ಅವರೂ ನಾಲ್ಕಾರು ತಿಂಗಳಿಂದ ಬಂದಿದ್ದಾರೆ. ನಾನು ಈ ವಿಷಯದ ಬಗ್ಗೆ ಮೈಸೂರಿನ ಕನ್ಸರ್ವೇಟರ್ ಆಫ್ ಫಾರೆಸ್ಟ್ ಅವರಿಗೆ ಕಾಗದ ಬರೆದಿದ್ದೇನೆ, ನೇರವಾಗಿ ಅವರಿಗೆ ಹೇಳಿದ್ದೇನೆ. ಆದರೂ ಕೂಡ ಇದರ ಬಗ್ಗೆ ಏನೂ ಗಮನಿಸದೆ ಇನ್ನೂ ಹೆಚ್ಚಿನ ಜನ ಬರುವುದಕ್ಕೆ ಅವಕಾಶ ಕೊಟ್ಟು, ಕೆಲಸ ಮಾಡಿದರೆ ನಮ್ಮ ಅರಣ್ಯ ಲೂಟಿಯಾಗುತ್ತದೆ ಅಲ್ಲಿಗೆ ಒಬ್ಬರೂ ಹೋಗಿಲ್ಲ ದಯವಿಟ್ಟು ತಾವು ಖುದ್ದು ಬನ್ನಿ, ನಾನು ಕರೆದುಕೊಂಡು ಹೋಗುತ್ತೇನೆ. ಅವರು ಗುಡಿಸಲು ಹಾಕಿಕೊಂಡು ಅಡುಗೆ ಮಾಡಿ ಜೀವನ ಮಾಡುತ್ತಿದ್ದಾರೆ. ಇದನ್ನು ತಮಗೆ ತೋರಿಸುತ್ತೇನೆ. ಇದನ್ನು ಬಹಳ ಸೀರಿಯಸ್ ಆಗಿ ತೆಗೆದುಕೊಂಡು ಅದಷ್ಟು ಬೇಗ ಅವರನ್ನು ಅಲ್ಲಿಂದ ಕೆಳಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಏನು ಸೂಚನೆ ಕೊಟ್ಟಿದ್ದಾರೆ, ಈ ಬಗ್ಗೆ ಕೂಡಲೇ ಕಾರ್ಯಾಚರಣೆ ಮಾಡುತ್ತೇನೆ.